**OS 51/2016** **DW-2**

**<u>ಸಾಕ್ಷಿಗೆ ದಿನಾಂಕ 03-07-2025ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು</u>**

**<u>ಮುಖ್ಯ ವಿಚಾರಣೆ ಪ್ರತಿವಾದಿ ಪರ ಶ್ರೀ ಜಿ.ಎ.ಡಿ. ವಕೀಲರಿಂದ</u>**

ನಾನು ನನ್ನ ಸಾಕ್ಷ್ಯವನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದ ವಿಷಯಗಳು ಸತ್ಯ ಮತ್ತು ನಿಜ ಇರುತ್ತದೆ ಆದ್ದರಿಂದ ಸದರಿ ನನ್ನ ಪ್ರಮಾಣ ಪತ್ರವನ್ನು ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಸರ್ವೆ ನಂ. 330ರ 1962-63ರ ಪಹಣಿ ಪತ್ರಿಕೆಯ ನಕಲು ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಶಾನೆ ಡಿ-1 ಎಂದು ಮತ್ತು ಅದರಲ್ಲಿರುವ ಸರ್ವೆ ನಂ. 330ರ ದಾಖಲೆಯನ್ನು ನಿಶಾನೆ ಡಿ-1(ಎ) ಎಂದು ಗುರುತಿಸಲಾಯಿತು. ಸರ್ವೆ ನಂ. 330ರ 1963 ರಿಂದ 1973ರ ವರೆಗಿನ ಪಹಣಿ ಪತ್ರಿಕೆಯ ನಕಲು ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಶಾನೆ ಡಿ-2 ಎಂದು, ಸರ್ವೆ ನಂ. 330ರ 2018-19 ಮತ್ತು 2021-22ರ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಶಾನೆ ಡಿ-3 ಮತ್ತು ಡಿ-4 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಚಿತ್ತಾಪೂರ.